**ದಿಃ 01-07-2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಅರ್ಜಿದಾರ ಪರ ವಕೀಲರಾದ ಶ್ರೀ ಕೆ ಪಿ ಎಸ್ ರವರಿಂದ

ನಾನು ಖಾಸಗಿಯಾಗಿ ತನಿಖೆ ಮಾಡುವ ಬಗ್ಗೆ ಗೃಹ ಇಲಾಖೆಯಿಂದ ಯಾವುದೇ ಪರವಾನಿಗೆ ಪತ್ರ ಪಡೆದುಕೊಂಡಿಲ್ಲ. ಕಂಪೆನಿಯವರು ಈ ಪ್ರಕರಣದಲ್ಲಿ ತನಿಖೆಯನ್ನು ಮಾಡಿ ವರದಿಯನ್ನು ನೀಡಲು ನನಗೆ ಅಧಿಕಾರ ಪತ್ರವನ್ನು ನೀಡಿದ್ದರು. ಅದರಂತೆ ತನಿಖೆ ವರದಿಯನ್ನು ಸಲ್ಲಿಸಿ ಅವರಿಂದ ತನಿಖಾ ಖರ್ಚನ್ನು ಪಡೆದುಕೊಂಡಿರುತ್ತೇನೆ. ನಿಆರ್-5 ರಲ್ಲಿ ನನಗೆ ಯಾವುದೇ ತನಿಖೆಯನ್ನು ಮಾಡಲು ಕಂಪೆನಿಯವರು ನಿಗಧಿತವಾಗಿ ಆತೋರೈಸೇಶನ್ ನೀಡಿಲ್ಲ ಎಂದರೆ ಸರಿ ಅಲ್ಲಾ. ನನಗೆ ಕೇವಲ ಪೋಲೀಸು ದಾಖಲೆಗಳನ್ನು ಪಡೆದುಕೊಂಡು ಕಂಪೆನಿಗೆ ವರದಿ ಕೊಡುವಂತೆ ಮಾತ್ರ ನಿಆರ್-5 ರಲ್ಲಿ ತಿಳಿಸಿದ್ದಾರೆ ಎಂದರೆ ಸರಿ ಅಲ್ಲಾ. ನಿಆರ್-5 ಆತೋರೈಸೇಶನ್ ಪ್ರಕಾರ ನಾನು ಕೇವಲ ಪೋಲೀಸು ಠಾಣೆಯಿಂದ ದಾಖಲಾತಿ ಪಡೆದುಕೊಂಡು ವರದಿಯನ್ನು ಕಂಪೆನಿಗೆ ನೀಡಿದ್ದೇನೆ ಎಂದರೆ ಸಾಕ್ಷಿ ನಾನು ತನಿಖೆ ಮಾಡಿಯೇ ವರದಿ ನೀಡಿದ್ದೇನೆ ಅಂತ ನುಡಿಯುತ್ತಾರೆ. ನಾನು ಅರ್ಜಿದಾರ ಮೋಟಾರು ಸೈಕಲ್ ಸವಾರ ನಿತೇಶ ಮತ್ತು ಅದೇ ಮೋಟಾರು ಸೈಕಲ್ ಹಿಂಬದಿ ಸವಾರ ಮಂಜುನಾಥ ಮತ್ತು ರಾಧಾಕೃಷ್ಣ ಇವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ಪಡೆದುಕೊಂಡಿಲ್ಲ. ನಾನು ಅಪಘಾತ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ ಎಂದರೆ ಸರಿ. ಸಾಕ್ಷಿ ಅದು ಕುಂದಾಪುರದಲ್ಲಿ ಆಗಿದೆ ಅಂತ ಗೊತ್ತು ಆದರೆ ಅದು ಎಲ್ಲಿ ಆಗಿದೆ ಅಂತ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಾನು ಪೋಲೀಸು ದಾಖಲಾತಿಗಳಾದ ಎಫ್ ಐ ಆರ್, ಸ್ಥಳ ಮಹಜರು, ಸ್ಥಳ ನಕ್ಷೆ, ಮೋಟಾರು ವಾಹನ ಪರೀಕ್ಷಕರ ವರದಿ, ಗಾಯದ ಪ್ರಮಾಣ ಪತ್ರಗಳನ್ನು, ದೋಷಾರೋಪಣಾ ಪತ್ರ ಇವುಗಳನ್ನು ಓದಿ ನೋಡಿ ತಿಳಿದುಕೊಂಡಿದ್ದೇನೆ. ದಾಖಲಾತಿ ಪ್ರಕಾರ ಅಪಘಾತವು ಕುಂದಾಪುರ ತಾಲೂಕು, ಉಪ್ಪಿನಕುದ್ರು ಗ್ರಾಮ, ಹಾಡಿ ಬೆಟ್ಟು ಕ್ರಾಸ್ ಎಂಬಲ್ಲಿ ಆಗಿದೆ ಅಂತ ಕಂಡು ಬರುತ್ತದೆ ಎಂದರೆ ಸರಿ. ನಾನು ಈ ಸ್ಥಳಕ್ಕೆ ಭೇಟಿ ಕೊಟ್ಟಿಲ್ಲ. ಪೋಲೀಸು ದಾಖಲಾತಿ ಎಫ್ ಐ ಆರ್ ಮತ್ತು ದೋಷಾರೋಪಣಾ ಪತ್ರದಲ್ಲಿ ಕಾಣಿಸಿದ ವಿಷಯಗಳು ಸುಳ್ಳಾಗಿದೆ ಅಂತ ನಾನು ವೈಯುಕ್ತಿಕವಾಗಿ ಪೋಲೀಸು ಉನ್ನತ

ಅಧಿಕಾರಿಗಳಿಗೆ ಆಗಲೀ ನ್ಯಾಯಾಲಯಕ್ಕಾಗಲೀ ಫಿರ್ಯಾದಿ ನೀಡಿಲ್ಲ. ಸಾಕ್ಷಿ ನನಗೆ ಆ ರೀತಿ ಫಿರ್ಯಾದಿ ಕೊಡುವ ಅಧಿಕಾರ ಇಲ್ಲಾ ಅಂತ ನುಡಿಯುತ್ತಾರೆ. ನಾನು ಕಂಪೆನಿಗೆ ನೀಡಿದ ನನ್ನ ತನಿಖಾ ವರದಿಯಲ್ಲಿ ಪೋಲೀಸರ ದಾಖಲಾತಿಯಲ್ಲಿ ದೋಷ ಇದೆ ಆ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮತ್ತು ನ್ಯಾಯಾಲಯಕ್ಕೆ ಫಿರ್ಯಾದಿ ಸಲ್ಲಿಸಬೇಕಾಗುತ್ತದೆ ಅಂತ ನಾನು ಅಭಿಪ್ರಾಯಪಟ್ಟು ಆ ರೀತಿ ಅದರಲ್ಲಿ ಬರೆದು ಕಾಣಿಸಿಲ್ಲ. ಕುಂದಾಪುರದಿಂದ ಉಪ್ಪಿನಕುದ್ರು 2 ಕಿ.ಮೀ. ದೂರದಲ್ಲಿದೆ ಎಂದರೆ ಇದ್ದಿರಬಹುದು.

ಅಪಘಾತದಲ್ಲಿ ಅರ್ಜಿದಾರನಿಗೆ ತಲೆಗೆ ತೀವ್ರ ಸ್ವರೂಪದ ಗಾಯ ಆಗಿದೆ ಎಂದರೆ ಸಾಕ್ಷಿ ಆಗಿರಬಹುದು ಅಂತ ನುಡಿಯುತ್ತಾರೆ. ಸಾಕ್ಷಿಗೆ ನಿಪಿ-4 ಅರ್ಜಿದಾರ ನಿತೇಶನ ಗಾಯದ ಪ್ರಮಾಣ ಪತ್ರ ತೋರಿಸಿದ್ದು ಅದರಲ್ಲಿ ತಲೆಗೆ ತೀವ್ರ ಸ್ವರೂಪದ ಗಾಯ ಆಗಿದ್ದು ಕಾಣಿಸಿದ್ದಾರೆ ಎಂದರೆ ಸರಿ. ಅವನನ್ನು ಅಪಘಾತದಲ್ಲಿ ಅರ್ಜಿದಾರ ನಿತೀಶನಿಗೆ ಪ್ರಜ್ಞೆ ತಪ್ಪಿ ಅವನನ್ನು ಚಿನ್ಮಯಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಅಲ್ಲಿ ಆಗುವುದಿಲ್ಲ ಅಂತ ಹೇಳಿ ಹೆಚ್ಚಿನ ಚಿಕಿತ್ಸೆಗೆ ಮಣಿಪಾಲದ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ. ನಿಪಿ-4 ಗಾಯದ ಪ್ರಮಾಣ ಪತ್ರದಲ್ಲಿ ನಿತೀಶ ಅರ್ಜಿದಾರ ಮದ್ಯಪಾನ ಮಾಡಿದ ಬಗ್ಗೆ ಕಾಣಿಸಿಲ್ಲ. ಗಾಯಾಳು ಅರ್ಜಿದಾರ ನಿತೀಶ ಇವರ ಭಾವ ರಾಘವೇಂದ್ರ ರವರು ಚಿನ್ಮಯಿ ಆಸ್ಪತ್ರೆಯಿಂದ ಮಣಿಪಾಲ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗೆ ಕರೆದುಕೊಂಡು ಹೋಗಿದ್ದಾರೆ. ರಾಘವೇಂದ್ರ ರವರು ಈ ಅಪಘಾತವನ್ನು ನೋಡಿಲ್ಲ. ಅಪಘಾತ ಸ್ಥಳದಿಂದ ಚಿನ್ಮಯಿ ಆಸ್ಪತ್ರೆಗೆ ಅರ್ಜಿದಾರರನ್ನು ಸ್ಥಳೀಯರು ಕರೆದುಕೊಂಡು ಬಂದು ದಾಖಲಿಸಿದ್ದಾರೆ. ನಿಪಿ-4 ಗಾಯದ ಪ್ರಮಾಣ ಪತ್ರದಲ್ಲಿ ಅಪಘಾತ ಸ್ಥಳ ಕುಂದಾಪುರ ಎಂದು ನಮೂದು ಮಾಡಿದ್ದು ಅದನ್ನು ವೈದ್ಯರಿಗೆ ಯಾರೂ ಹೇಳಿದ್ದು ಎಂದು ನನಗೆ ಗೊತ್ತಿಲ್ಲ. ನನ್ನ ತನಿಖೆ ಸಮಯದಲ್ಲಿ ನಿಪಿ-4 ನೀಡಿದಂತಹಾ ಡಾಃ ಕುಮಾರ್ ಅಮರೇಂದ್ರ ಇವರನ್ನು ನಾನು ವಿಚಾರಣೆ ಮಾಡಿಲ್ಲ.

ಹಿಂಬದಿ ಸವಾರ ಮಂಜುನಾಥನಿಗೆ ಈ ಅಪಘಾತದಲ್ಲಿ ಸಣ್ಣ ಗಾಯವಾಗಿರುವುದನ್ನು ನಾನು ತಿಳಿದುಕೊಂಡಿದ್ದೇನೆ. ಮಂಜನಾಥ ಚಿನ್ಮಯಿ

ಆಸ್ಪತ್ರೆಯಲ್ಲಿ ತನ್ನಗೆ ಗಾಯಕ್ಕೆ ಚಿಕಿತ್ಸೆ ಪಡೆದುಕೊಂಡಿದ್ದಾನೆ ಅಂತ ತಿಳಿಸಿದ್ದ. ಗಾಯಾಳು ಅರ್ಜಿದಾರ ಅಪಘಾತ ಸಮಯದಲ್ಲಿ ಮದ್ಯಪಾನ ಮಾಡಿದ್ದಾನೆ ಅಂತ ನನ್ನ ಪ್ರಮಾಣ ಪತ್ರದಲ್ಲಿ ಕಾಣಿಸಿದ್ದು, ಅದಕ್ಕೆ ಪೂರಕವಾಗಿ ನಾನು ನ್ಯಾಯಾಲಯಕ್ಕೆ ದಾಖಲಾತಿಯನ್ನು ನೀಡಿದ್ದೇನೆ. ಸಾಕ್ಷಿಗೆ ಅವರು ಹಾಜರುಪಡಿಸಿದ ದಾಖಲಾತಿಗಳನ್ನು ತೋರಿಸಿದ್ದು, ಸಾಕ್ಷಿ ನ್ಯಾಯಾಲಯದ ಎದುರು ಆ ದಾಖಲಾತಿಗಳನ್ನು ನೋಡಿ ನಾನು ಹಾಜರುಪಡಿಸಿದ ದಾಖಲಾತಿಗಳಲ್ಲಿ ಅರ್ಜಿದಾರ ಗಾಯಾಳು ನಿತೀಶ ಅಪಘಾತದ ಸಮಯದಲ್ಲಿ ಮದ್ಯಪಾನ ಮಾಡಿದ್ದಾನೆ ಅಂತ ಕಾಣಿಸಿಲ್ಲ ಅಂತ ನುಡಿಯುತ್ತಾರೆ. ಅಪಘಾತದ ಬಗ್ಗೆ ನನಗೆ ವೈಯುಕ್ತಿಕ ಮಾಹಿತಿ ಇಲ್ಲಾ ಕೇವಲ ದಾಖಲಾತಿ ಆಧಾರದ ಮೇಲೆ ಹೇಳುತ್ತಿದ್ದೇನೆ. ನಾನು ತನಿಖೆ ಸಮಯದಲ್ಲಿ ಪೋಲೀಸರಿಂದ ಪಡೆದುಕೊಂಡಂತಹಾ ನಿಪಿ-5 ಮೋಟಾರು ವಾಹನ ನಿರೀಕ್ಷಕರ ವರದಿ ಪ್ರಕಾರ ಅರ್ಜಿದಾರನ ಮೋಟಾರು ಸೈಕಲು ಕೆಎ-20-ಡಬ್ಲ್ಯು- 4188 ಮತ್ತು 1 ನೇ ಎದ್ರುದಾರರ ಮೋಟಾರು ಸೈಕಲು ಕೆಎ-20-ಎಸ್-3902 ಜಖಂ ಆಗಿದೆ ಅಂತ ಕಾಣಿಸಲಾಗಿದೆ ಎಂದರೆ ಸಾಕ್ಷಿ ಹೌದು ಅಂತ ನುಡಿಯುತ್ತಾರೆ.

ನಾನು ಚಿನ್ಮಯಿ ಆಸ್ಪತ್ರೆಗೆ ಹೋಗಿದ್ದೆ, ಆದರೆ ಆಸ್ಪತ್ರೆಯಿಂದ ಈ ಪ್ರಕರಣ ಸಂಬಂಧಪಟ್ಟ ಯಾವುದೇ ದಾಖಲೆ ನನಗೆ ಸಿಕ್ಕಿಲ್ಲ. ನಾನು ಚಿನ್ಮಯಿ ಆಸ್ಪತ್ರೆಗೆ ಹೋಗಿ ನನಗೆ ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲಾತಿ ನೀಡಿ ಅಂತ ಕೇಳಿದ ಬಗ್ಗೆ ಯಾವುದೇ ದಾಖಲಾತಿ ಇಲ್ಲಾ. ನಾನು 1 ನೇ ಪ್ರತಿವಾದಿ ರಾಧಾಕೃಷ್ಣ ಇವರಿಂದ ಯಾವುದೇ ಲಿಖಿತ ಹೇಳಿಕೆ ಪಡೆದುಕೊಂಡಿಲ್ಲ. 1 ನೇ ಪ್ರತಿವಾದಿ ಮೋಟಾರು ಸೈಕಲು ಕೆಎ-20-ಡಬ್ಲ್ಯು- 4188 ಇದರ ಮಾಲೀಕ ಎಂದರೆ ಸರಿ. ನನ್ನ ಖಾಸಗಿ ತನಿಖೆ ಸಮಯದಲ್ಲಿ ಸದ್ರಿ ರಾಧಾಕೃಷ್ಣ ಇವರ ಚಾಲನಾ ಪರವಾನಿಗೆ ಪತ್ರವನ್ನು ನಾನು ಆರ್ ಟಿ ಓ ಕಚೇರಿಯಿಂದ ಪಡೆದುಕೊಂಡಿಲ್ಲ. ನಾನು ರಾಧಾಕೃಷ್ಣ ಇವರ ಲೈಸನ್ಸು ನನ್ನ ತನಿಖೆ ಸಮಯ ಪಡೆದುಕೊಂಡಿದ್ದೇನೆ. ಅವರು ಸದ್ರಿ ಲೈಸನ್ಸು ಎಷ್ಟು ಬಾರಿ ನವೀಕರಣ ಮಾಡಿದ್ದಾರೆ ಅಂತ ನನಗೆ ನೆನಪಿಲ್ಲ. ಅಪಘಾತ ಸಮಯದಲ್ಲಿ ಸದ್ರಿ ರಾಧಾಕೃಷ್ಣ ಇವರಿಗೆ ಪರವಾನಿಗೆ ಇತ್ತು ಎಂದರೆ ಸಾಕ್ಷಿ ಸರಿ ಅಲ್ಲಾ ಅಂತ ನುಡಿಯುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ರಾಧಾಕೃಷ್ಣ ರವರು ಅಪಘಾತ ಆದ ನಂತರ ಚಾಲನಾ ಪರವಾನಿಗೆ ಪತ್ರ ನವೀಕರಣ ಮಾಡಿಕೊಂಡಿದ್ದಾರೆ ಅಂತ ಕಾಣಿಸಿದ್ದು

ಸರಿ ಇದೆ. ನನ್ನ ತನಿಖೆ ಸಮಯದಲ್ಲಿ ರಾಧಾಕೃಷ್ಣ ರವರ ಚಾಲನಾ ಪರವಾನಿಗೆ ಪತ್ರವನ್ನು ರದ್ದುಪಡಿಸಿದ್ದಾರೆಯೇ ಅಮಾನತುಪಡಿಸಿದ್ದಾರೆಯೇ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ರಾಧಾಕೃಷ್ಣ ರವರು 1 ತಿಂಗಳ ನಂತರ ಚಾಲನಾ ಪರವಾನಿಗೆ ಪತ್ರ ನವೀಕರಣ ಮಾಡಿದ್ದರಿಂದ ಅವರು ಆರ್ ಟಿ ಓ ಕಚೇರಿಯಲ್ಲಿ ದಂಡ ಕಟ್ಟಿ ನವೀಕರಣ ಮಾಡಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1ನೇ ಪ್ರತಿವಾದಿ ರಾಧಾಕೃಷ್ಣ ಇವರಿಂದ ವಿಮಾ ಕಂಪೆನಿಯವರು ಕ್ಲೇಮ್ ಫಾರ್ಮ ಪಡೆದುಕೊಂಡ ಬಗ್ಗೆ ನನಗೆ ಗೊತ್ತಿಲ್ಲ. ಕುಂದಾಪುರ ಟ್ರಾಫಿಕ್ ಪೋಲೀಸ್ ಠಾಣೆಯಿಂದ ನಾನು ತನಿಖೆಗೆ ಬೇಕಾಗುವಂತಹಾ ಎಲ್ಲಾ ದಾಖಲಾತಿಗಳನ್ನು ಪಡೆದುಕೊಂಡಿದ್ದೇನೆ. ರಾಧಾಕೃಷ್ಣ ಇವರು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ತಮ್ಮ ಮೇಲೆ ಹೊರಿಸಲಾದ ಆರೋಪಕ್ಕೆ ಒಪ್ಪಿಕೊಂಡು ದಂಡ ತುಂಬಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ವಿಷಯದ ಬಗ್ಗೆ ನಾನು ಯಾವುದೇ ತನಿಖೆ ಮಾಡಿಲ್ಲ. ನಾನು ಮಣಿಪಾಲ ಕೆಎಂಸಿ ಆಸ್ಪತ್ರೆಗೆ ಹೋಗಿಲ್ಲ ಮತ್ತು ಯಾವುದೇ ದಾಖಲಾತಿ ಪಡೆದುಕೊಂಡಿಲ್ಲ. ಅರ್ಜಿದಾರರಿಗೆ ಚಿಕಿತ್ಸೆ ನೀಡಿದ ಯಾವುದೇ ವೈದ್ಯರ ಹೇಳಿಕೆ ನಾನು ಪಡೆದುಕೊಂಡಿಲ್ಲ. ಈ ಅಪಘಾತಕ್ಕೆ ಸಂಬಂಧಪಟ್ಟ ಅಪಘಾತ ನಡೆದ ಸ್ಥಳದಲ್ಲಿ ಸ್ಥಳೀಯರನ್ನು ವಿಚಾರಣೆ ಮಾಡಿ ಅವರ ಹೇಳಿಕೆ ನಾನು ಪಡೆದುಕೊಂಡಿಲ್ಲ. ಅಪಘಾತ ಸಂಭವಿಸಿ 24 ಗಂಟೆ ಒಳಗೆ ಮಂಜುನಾಥ ರವರು ದೂರು ನೀಡಿದ್ದಾರೆ ಅದರಂತೆ ಕುಂದಾಪುರ ಪೋಲೀಸು ಠಾಣೆಯಲ್ಲಿ 1ನೇ ಪ್ರತಿವಾದಿ ರಾಧಾಕೃಷ್ಣ ವಿರುದ್ಧ ದೂರು ದಾಖಲಾಗಿದ್ದು, ಎಫ್ ಐ ಆರ್ ನಲ್ಲಿ ನಮೂದಾಗಿದ್ದ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಈ ಪ್ರಕರಣದಲ್ಲಿ ನಾನು ಯಾವುದೇ ತನಿಖೆ ಮಾಡದೇ ಸುಳ್ಳು ವರದಿ ನ್ಯಾಯಾಲಯಕ್ಕೆ ನೀಡಿದ್ದೇನೆ ಎಂದರೆ ಸರಿ ಅಲ್ಲಾ. ನನಗೆ ಸಾಕ್ಷ್ಯ ನೀಡಲು ಇನ್ಸುರೆನ್ಸು ಪರವಾಗಿ ಯಾವುದೇ ಅಧಿಕಾರ ಇಲ್ಲಾ ಎಂದರೆ ಸರಿ ಅಲ್ಲಾ. ಕಂಪೆನಿ ಪರವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲಾ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರ ಸುಳ್ಳು ಎಂದರೆ ಸರಿ ಅಲ್ಲಾ.

<u>**ಮರು ವಿಚಾರಣೆಃ**</u> ಇಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ**

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
**ಕುಂದಾಪುರ**